ಶ್ರೀ ಜೆ. ಎಚ್. ಪಟೀಲ್.—ಅಧ್ಯಕ್ಷರೇ, ಈ ಪ್ರಶ್ನೆಗೆ ಕೊಟ್ಟಿರುವ ಉತ್ತರ ಎಷ್ಟು ವಿಚಿತ್ರವಾಗಿದೆ ಯೆಂದರೆ (೨) ತುಂಗಾ ಮತ್ತು ಭದ್ರಾ ಆಯಕಟ್ಟಿನಲ್ಲಿ ಬರುವ ಕಂದಾಯ ಇಲಾಖೆಯ ಮತ್ತು ಗೋಮಾಳದ ಜಮೀನುಗಳನ್ನು ವಿತರಣೆ ಮಾಡಬಾರದೆಂದು ಸರ್ಕಾರದ ಆದೇಶವಿದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಹೇಳಿದ್ದಾರೆ; ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಹೊಸನಗರ ತಾಲ್ಲೂಕು ಗಳ ಕೆಲವು ಭಾಗಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳು ಈ ಆಜ್ಞೆಯ ವ್ಯಾಪ್ತಿಗೆ ಬರುತ್ತದೆ ಎಂದೂ ಹೇಳಿದ್ದಾರೆ. ಇವರು ಹೇಳಿರುವ ಎರಡು ತಾಲ್ಲೂಕುಗಳಲ್ಲಿ ಗೋಮಾಳ ಜಮೀನುಗಳು ಇಲ್ಲ. ತುಂಗಾ ಮತ್ತು ಭದ್ರಾ ಆಯಕಟ್ಟಿನಲ್ಲಿ ಬರತಕ್ಕ ಗೋಮಾಳ ಜಮೀನಂಗಳೇನಿವೆ ಅವು ಬಹಳ ಬೆಲೆಯುಳ್ಳ ನೀರಾವರಿ ಇರತಕ್ಕ ಜಮೀನು. ಅವುಗಳನ್ನು ಹಂಚದೇಹೋದರೆ ಸರ್ಕಾರದ ಉದ್ದೇಶ ಏನಿದೆ ಅದು ಸಾಧನೆಯಾದಂತಾಗುತ್ತದೆಯೇ ಎಂಬುದನ್ನು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ—ಸ್ವಾಮಿ, ಆಯಕಟ್ಟು ಎಂದರೆ ಇಂಜಿನಿಯರ್ಸ್ ಅವರ ಅಭಿಪ್ರಾಯದ ಪ್ರಕಾರ ೧೫೦ ಮೈಲಿವರೆಗಿನ ಕಟ್ಟಿ ಮೇಲಿರತಕ್ಕ ಪ್ರದೇಶ ಎಂದು. ಈ ಆಣೆಕಟ್ಟಿಗೆ ಬರತಕ್ಕ ನೀರು ಈ ಪ್ರದೇಶ ಏನು ಕೊಟ್ಟಿದ್ದಾರೆ ಈ ಪ್ರದೇಶದಿಂದ ಬರುತ್ತದೆಯಂತೆ. ಇದನ್ನು ಒಪ್ಪಬೇಕು ಬಿಡಬೇಕು ಎಂಬ ಪ್ರಶ್ನೆ ಬೇರೆ. ತಾಂತ್ರಿಕ ತಜ್ಞರ ಅಭಿಪ್ರಾಯವನ್ನು ನಾವು ಒಪ್ಪಲೇಬೇಕಾಗುತ್ತದೆ. ಅದು ಸರಿಯಲ್ಲ ಎಂಬ ವಾದವೂ ಒಂದುಕಡೆ ಇದೆ. ಅದಕ್ಕೆ ಒಂದು ತಜ್ಞರ ಸಮಿತಿ ನೇಮಿಸಿದ್ದೇವೆ. ಇದರ ವರದಿ ಬಂದ ತಕ್ಷಣ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್—ಸ್ವಾಮಿ, ತಮ್ಮ ಆಜ್ಞೆಯೇನೋ ಈ ರೀತಿ ಇದ್ದರೂ ಕೂಡ ವಾಸ್ತವಿಕ ಪರಿಸ್ಥಿತಿ ಏನಿದೆಯೆಂದರೆ ಶಿವಮೊಗ್ಗ ತಾಲ್ಲೂಕಿನಲ್ಲಿ ಬಹುತೇಕ ಗೋಮಾಳ ಜಮೀನು ಬಗರ್‌ಹುಕುಂ ಸಾಗುವಳಿಯಲ್ಲಿದೆ. ಟಿ.ಟಿ.ಆರ್. ಎಂಬುದು ಹೋಗಿ ಈಗ ಟಿ.ಟಿ.ರಾಕ್ಷಸ ಆಗಿದೆ. ಇದರಿಂದ ರೈತರನ್ನು ವಿಮೋಚನೆ ಮಾಡಬೇಕಾದರೆ ಈ ಕಾನೂನನ್ನು ಸಡಿಲಗೊಳಿಸಬೇಕಾಗುತ್ತದೆ. ಆದ್ದರಿಂದ ಅದಷ್ಟು ಜಾಗ್ರತೆ ಈ ಆಜ್ಞೆಯನ್ನು ವಾಪಸು ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿ ವಾಪಸ್ ತೆಗೆದುಕೊಳ್ಳುವ ಸಂಭವ ಇಲ್ಲ. ತಜ್ಞರ ಸಮಿತಿ ವರದಿ ಬಂದ ಮೇಲೆ ಈ ಆಜ್ಞೆ ವಾಪಸ್ ತೆಗೆದುಕೊಳ್ಳಬೇಕೇ ಬಿಡಬೇಕೆ ಎಂಬುದನ್ನು ಪರಿಶೀಲಿಸುತ್ತೇವೆ.

Establishment of the University of Health Sciences in the State

22. SRI G. BASAVANNAPPA (Holehonnur).—Will the Minister for Health and Family Welfare be pleased to state—

(*a*) whether there is any proposal before the Government to establish a University of Health Sciences in the State ;

(*b*) if so, at what stage the proposal stands at present ?

SRI B. BASAVALINGAPPA (Minister for Revenue) [On behalf of Sri M. Mallappa (Minister for Health and Family Welfare)].—

(*a*) Yes.

(*b*) The University of Health Sciences Bill was passed by the Legislative Assembly on 8th April 1975. The Bill was taken up for consideration in the Legislative Council on 28th April 1975, but consideration was adjourned, since it was felt necessary to consult the Government of India. The Government of India when consulted did not agree to the proposal of the State Government. The question of setting up of Health Sciences University is therefore allowed to rest for the time being.

SRI G. BASAVANNAPPA.—What is the thinking of the Government—whether it is going to take up the matter once again ?

† SRI B. BASVALINGAPPA—This matter has been engaging the attention of the Government and also the public for some time past The question is whether it should be started. Unless the Government of India i e., the Ministry of Health and the Medical Council permit us to start the University. It is not possible to start this University. Therefore. as per the desire of the Hon. Member we will make another effort to carry on the correspondence with the Government of India as to whether they are permitting to start this University.

ಶ್ರೀ ಎಚ್. ಗಂಗಾಧರನ್.—ಸ್ವಾಮಿ ಉತ್ತರದಲ್ಲಿ ಭಾರತ ಸರ್ಕಾರದೊಡನೆ ರಾಜ್ಯ ಸರ್ಕಾರದವರು ಸದರಿ ಸಲಹೆಯ ಬಗ್ಗೆ ಸಮಾಲೋಚಿಸಿದಾಗ ಅವರು ಅದನ್ನು ಒಪ್ಪಲಿಲ್ಲ ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರವನ್ನು ಯಾವಾಗ ಕೇಳಿದಿರಿ, ಅವರು ಒಪ್ಪದೇ ಇರುವುದಕ್ಕೆ ಕಾರಣ ಏನು, ಯಾವ ಸರ್ಕಾರ ಒಪ್ಪಲಿಲ್ಲ ಎಂಬುದನ್ನು ಹೇಳುತ್ತೀರಾ ?

SRI B. BASAVALINGAPPA—The Ministry of Health and Family Planning in their letter dated 31st August 1976 intimated that in view of the fact that the responsibility of maintenance of standard in medical education is clearly and squarely lies with the Medical Council of India and since it is the subject which comes under 66 Union List of the Constitution of India, it is beyond the constitutional jursidiction of the State Government to set up such an University.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ಕಳೆದ ಶಾಸನಸಭಾ ಅವಧಿಯಲ್ಲಿ ಈ ಬಗ್ಗೆ ಒಂದು ಜಂಟೀ ಸಲಹಾ ಸಮಿತಿಯನ್ನು ಮಾಡಿದ್ದರು. ಆ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದು ಆದರಲ್ಲಿ ಸಕ್ರಿಯವಾಗಿ ಪಾತ್ರ ವಹಿಸಿದ್ದೇನೆ. ದೆಹಲಿಯಲ್ಲಿ ಮೆಡಿಕಲ್ ಕೌನ್ಸಿಲ್ಲಿನ ಅಧಿಕಾರಿಗಳ ಹತ್ತಿರ ಚರ್ಚೆ ಮಾಡಿದಾಗ ಅವರು ಒಪ್ಪಿಗೆ ಕೊಟ್ಟಿದ್ದರು. ಆನಂತರ ಅದು ಯಾತಕ್ಕೆ ಸ್ಥಗಿತವಾಯಿತು ಎಂಬುದು ಅರ್ಥವಾಗಲಿಲ್ಲ. ಇದಕ್ಕೆ ಏನು ಕಾರಣ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈ ಪತ್ರದ ಪ್ರಕಾರ ಅದು ಅರ್ಥವಾಗಲೇಬೇಕು. ನಮಗಂತು ಅರ್ಥವಾಗಿದೆ. ಮೆಡಿಕಲ್ ಕೌನ್ಸಿಲ್ಲಿನವರು ಮತ್ತು ಕೇಂದ್ರ ಸರ್ಕಾರದವರು ಪರವಾನಗಿ ಕೊಡುವವರೆಗೂ ಈ ವಿಷಯವನ್ನು ಪರಿಶೀಲನೆ ಮಾಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ.

Rural Electrification Programme in Gulbarga District

26 SRI PRABHAKAR TELKAR (Chitapur).—Will the Minister of State for Information and Youth Services be pleased to state—

(*a*) the No. of Taluks taken under Rural Electrification programme in Gulbarga District (Names of the taluks be furnished) :

(*b*) the No. of villages of Chittapur Taluk that have been provided with electricity during the period from 1975–76 to 1977–78 :

(*c*) what steps have been taken to provide electricity to the remaining villages of Chittapur Taluk (Particulars be furnished) ?